# "ಶ್ರೀವ್ಯಾಸರಾಜರು ಮತ್ತು ಪ್ರಾಣದೇವರು"

**"ನಮಾಮಿ ದೂತಂ ರಾಮಸ್ಯ ಸುಖದಂ ಚ ಸುರದ್ರುಮಮ್ ।**

**ಪೀನವೃತ್ತಂ ಮಹಾಬಾಹುಂ ಸರ್ವಶತ್ರು ನಿವಾರಕಮ್" ।**

**ಯಂತ್ರೋದ್ಧಾರಕ ಪ್ರಾಣದೇವರು** – ವ್ಯಾಸರಾಜರು ತುಂಗಭದ್ರೆಯ ಚಕ್ರತೀರ್ಥದ ಬಳಿ ಸ್ನಾನಾಹ್ನೀಕಗಳನ್ನು ಪೂರೈಸಿ ಸಮೀಪದ ಪ್ರಶಾಂತವಾದ ಸ್ಥಳದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಆಗ ವಾಯುದೇವರು ಮತ್ತೆಮತ್ತೆ ಆಂಜನೇಯನ ರೂಪದಲ್ಲಿ ಬಂದು ತಮ್ಮ ಪ್ರತಿಷ್ಟಾಪನೆಗೆ ಆದೇಶವಿತ್ತರು. ಒಮ್ಮೆ ಅವರು ಹೀಗೆ ಧ್ಯಾನಕ್ಕೆ ಕುಳಿತಾಗ, ಬಂಡೆಯೊಂದರಿಂದ ಕಪಿಯೊಂದು ಬಂದು ಕಣ್ಮರೆಯಾಯಿತು. ಈ ಘಟನೆ ಹಲವಾರು ಬಾರಿ ಪುನರಾವರ್ತನೆಯಾದಾಗ, ಅದೇ ಬಂಡೆಯ ಕಲ್ಲಿನ ಮೇಲೆ ಅಂಗಾರದಿಂದ ಪ್ರಾಣದೇವರನ್ನು ಬರೆದು ದ್ವಾದಶನಾಮಗಳನ್ನು ತಿದ್ದಿ ಧ್ಯಾನಿಸಲು ಕಣ್ಮುಚ್ಚಿದರು. ಕಣ್ಣುಬಿಟ್ಟೊಡನೆಯೇ ಬಂಡೆಯ ಮೇಲೆ ಕೆತ್ತಲ್ಪಟ್ಟಿದ್ದ ಆ ಮೂರ್ತಿಯು ಜೀವ ತಳೆದು ಬಂಡೆಯಿಂದ ಕೆಳಗೆ ಹಾರಿ ಮಾಯವಾಯಿತು. ವ್ಯಾಸರಾಜರು ಮತ್ತೆ ಅಂಗಾರದಿಂದ ಮೂರ್ತಿಯನ್ನು ತಿದ್ದಿದರು. ಅದು ಮತ್ತೆ ಜೀವ ತಳೆದು ಮಾಯವಾಯಿತು. ಹೀಗೆ 12 ಸಲ ವ್ಯಾಸರಾಜರು ಮೂರ್ತಿಯನ್ನು ಅಲ್ಲಿ ಮೂಡಿಸಲು ಪ್ರಯತ್ನಿಸಿದಾಗ, ಹನ್ನೆರಡೂ ಸಲ ಅದು ಹಾರಿ ಹೋಯಿತು. ನಂತರ ಧ್ಯಾನಕ್ಕೆ ಕುಳಿತು ಮನಸ್ಸಿನಲ್ಲೇ ಕಾರಣವನ್ನು ಅರಿತರು.

ನಂತರ ಆ ಬಂಡೆಯ ಮೇಲೆ ಮೊದಲು ಷಟ್ಕೋಣವನ್ನೂ, ಅದರ ಸುತ್ತ ವಲಯಾಕಾರವನ್ನೂ ಯಂತ್ರದಂತೆ ರಚಿಸಿ, ಅದರ ಸುತ್ತಲೂ ಪದ್ಮದಳಗಳನ್ನು ಬರೆದರು. ಮಧ್ಯದಲ್ಲಿ ಯೋಗಾಸನಾರೂಡನಾಗಿ ಜಪಮಾಲೆ ಹಿಡಿದು ಕುಳಿತ ಧ್ಯಾನಮಗ್ನ ಮುಖ್ಯ ಪ್ರಾಣದೇವರನ್ನು ಬರೆದು ಮೊದಲು ಹಾರಿಹೋದ ಹನ್ನೆರಡು ಕಪಿಗಳನ್ನೂ, ಪದ್ಮದಳಗಳ ತುದಿಯಲ್ಲಿ ಮುಖ್ಯಪ್ರಾಣನಿಗೆ ಮಾಲಾಕಾರವಾಗಿ ಕಪಿಬಂಧ ಹೆಣೆದರು. ಈ ಯಂತ್ರದಲ್ಲಿ ಒಂದು ಕೋಟಿ ಬೀಜಾಕ್ಷರ ಮಂತ್ರ ಅಡಕವಾಗಿದೆಯೆಂದೂ, ಇದರ ಸಿದ್ಧಿಗಾಗಿ ವ್ಯಾಸರಾಜರು ಮೂರುಕೋಟಿ ಮಂತ್ರಗಳನ್ನು ಜಪಿಸಿ ಪ್ರಾಣದೇವರ ಸನ್ನಿಧಾನವನ್ನು ಸ್ಥಿರವಾಗಿ

ನಿಲ್ಲಿಸಿದ್ದಾರೆಂದೂ, ಅಪರೋಕ್ಷ ಜ್ಞಾನಿಗಳಾದ ವಿಜಯದಾಸರು ತಮ್ಮ ಯಂತ್ರೋದ್ಧಾರಕ ಸುಳಾದಿಯಲ್ಲಿ ತಿಳಿಸಿದ್ದಾರೆ.

**“ಮೂರು ಕೋಟಿ ಬೀಜಾಕ್ಷರ ಮಂತ್ರವ ಜಪಿಸಿ**
**ವ್ಯಾಸರಾಯರು ಎರೆದ ನಿನ್ನ ಈ ಸುಂದರ ಮೂರುತಿಯಲಿ”**

## 732 ಪ್ರಾಣದೇವರ ವಿಗ್ರಹಗಳ ಪ್ರತಿಷ್ಠಾಪನೆ –

ಮುಂದೆ ತಾವು 732 ಹನುಮಂತದೇವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಲು, ಈ ಯಂತ್ರೋದ್ಧಾರಕ ಪ್ರಾಣದೇವರೇ ವ್ಯಾಸರಾಜರಿಗೆ ಸ್ಫೂರ್ತಿಮೂರ್ತಿಯಾಯಿತು.

ಒಮ್ಮೆ ಮುಳುಬಾಗಿಲಿನಲ್ಲಿ ಶ್ರೀವ್ಯಾಸರಾಜರಿಗೆ ವಿಚಿತ್ರ ಸ್ವಪ್ನವಾಯಿತು. ಸ್ವಪ್ನದಲ್ಲಿ ಅವರು ಪ್ರಾಣದೇವರನ್ನು ಪೂಜಿಸಿದಂತೆಯೂ, ಅದು ನೋಡುನೋಡುತ್ತಿರುವಂತೆಯೇ ವಿಭಜನೆ ಹೊಂದಿ 732 ಮೂರ್ತಿಗಳಾಗಿ ಭಾಸವಾಯಿತು. ಸ್ವಪ್ನದಿಂದ ಎಚ್ಚೆತ್ತ ನಂತರ ವ್ಯಾಸರಾಜರು 732 ಮುಖ್ಯ ಪ್ರಾಣಪ್ರತೀಕಗಳನ್ನು ಪ್ರತಿಷ್ಠಾಪಿಸುವ ಸಂಕಲ್ಪ ಕೈಗೊಂಡರು.

## ವ್ಯಾಸರಾಜ ಪ್ರತಿಷ್ಟಿತ ಪ್ರಾಣದೇವರ ಲಕ್ಷಣಗಳು –

- **ಆಂಜನೇಯನ ಬಾಲಕ್ಕೆ ಘಂಟೆ ಇರುತ್ತದೆ**
- ಸೊಂಟದ ಮೇಲೆ ಸೌಗಂಧಿಕಾ ಪುಷ್ಪ ಸಹಿತವಾದ ಎಡಗೈ ಎರುತ್ತದೆ
- ಬಾಲದ ಹೊರಕ್ಕೆ ಚಾಚಿ ಎತ್ತಿರುವ ಬಲ ಅಭಯ ಹಸ್ತವಿರುತ್ತದೆ
- ಶಿರಸ್ಸಿನ ಮೇಲೆ ರಾಮನಾಮದ ಕೆತ್ತನೆಯಿರುತ್ತದೆ
- ಪ್ರಭಾವಳಿಯಲ್ಲಿ ದಶಾವತಾರ ಮೂಡಿರುತ್ತದೆ
- ಆಂಜನೇಯ ನವರತ್ನ ಮಾಲೆಯಿಂದ ಅಲಂಕೃತನಾಗಿರುತ್ತಾನೆ
- ಮೇಲ್ಭಾಗದ ಎಡ-ಬಲಗಳಲ್ಲಿ ಶಂಖ-ಚಕ್ರಗಳಿರುತ್ತವೆ
- ಚಂಡಿಕೆಗಳನ್ನು ಮುಡಿಕಟ್ಟಿರುತ್ತಾನೆ
- ಧೀರೋದ್ಧಾತ್ತನಾಗಿ ವೀರಾವೇಶದಿಂದ ಸಾಗರ ದಾಟಲು ಜಿಗಿಯುವ ಭಂಗಿಯಲ್ಲಿದ್ದಾನೆ
- ಕಾಲುಗಳ ಮಧ್ಯದಲ್ಲಿ ರಾವಣಾಸುರನ ಮಗ ಅಕ್ಷಯಕುಮಾರ ಸಂಹಾರವಾದ ಚಿತ್ರವಿರುತ್ತದೆ

ಸಾಮಾನ್ಯವಾಗಿ ಈ ಮೇಲ್ಕಂಡ ಲಕ್ಷಣಗಳಲ್ಲೇ ಇರುತ್ತದೆ “ಶ್ರೀವ್ಯಾಸರಾಜ ಪ್ರತಿಷ್ಟಿತ ಮುಖ್ಯಪ್ರಾಣದೇವರು”. ಎಲ್ಲ ಪ್ರಾಣದೇವರಲ್ಲೂ ಇಲ್ಲದಿರಬಹುದು. ಒಂದೊಂದರಲ್ಲಿ ಒಂದೊಂದು ರೀತಿ ಮೇಲ್ಕಂಡ ಲಕ್ಷಣಗಳು ಆಡಕವಾಗಿರುತ್ತವೆ. **ಸಾಮಾನ್ಯವಾಗಿ ಬಾಲದಲ್ಲಿ ಘಂಟೆ ಎಲ್ಲ ಪ್ರಾಣದೇವರಲ್ಲೂ ಕಾಣಸಿಗುತ್ತದೆ.**

## ವ್ಯಾಸರಾಜರಿಂದ ಪ್ರತಿಷ್ಟಿತ ಪ್ರಾಣದೇವರ ಕೆಲವು ಕ್ಷೇತ್ರಗಳು–

ಮುಳುಬಾಗಿಲು, ಮಜ್ಜಿಗೆಹಳ್ಳಿ ಮಾಧವತೀರ್ಥರ ಮೂಲಸಂಸ್ಥಾನವಿರುವ ತಂಬೇಹಳ್ಳಿ, ಕೋಲಾರದ ಬಳಿ ನರಸಾಪುರ, ಮಾಲೂರಿನಲ್ಲಿ, ಹೊಸಕೋಟೆಯಲ್ಲಿ, ಬೆಂಗಳೂರಿನ ಅಲಸೂರಿನಲ್ಲಿ, ಬೆಂಗಳೂರು ಸಿಟಿ ಮಾರ್ಕೆಟ್ ಬಳಿಯಿರುವ ಕೋಟೆ ಆಂಜನೇಯಸ್ವಾಮಿ, ಮೈಸೂರು ರಸ್ತೆಯ ಕರೇಕಲ್ಲು ಆಂಜನೇಯಸ್ವಾಮಿ, ನಂತರ ಬಿಡದಿ–ರಾಮನಗರ ಮಧ್ಯೆ ಇರುವ ಹನುಮಂತ, ಕೆಂಗಲ್ ಆಂಜನೇಯಸ್ವಾಮಿ, ದೇವರಹೊಸಹಳ್ಳಿ, ಚನ್ನಪಟ್ಟಣ, ಬ್ರಹ್ಮಣ್ಯಪುರ, ಮದ್ದೂರು, ಮಂಡ್ಯ, ಬನ್ನೂರು, ಟೀನರಸೀಪುರ, ಮೈಸೂರು, ಶ್ರೀರಂಗಪಟ್ಟಣ, ನಂಜನಗೂಡು, ಸತ್ಯಮಂಗಲ, ಈರೋಡ್, ಭವಾನಿ, ಸೇಲಂ, ಚಿಂತಲವಾಡಿ, ಹೀಗೆ ಶ್ರೀರಂಗಂಗೆ ಹೋಗುವ ದಾರಿಯಲ್ಲೆಲ್ಲಾ ಪ್ರತಿಷ್ಟೆ ಮಾಡಿದ್ದಾರೆ, ಪಾಂಡಿಚೇರಿ, ಮದ್ರಾಸಿನ ಸುಪ್ರಸಿದ್ಧ ಪಾರ್ಥಸಾರಥಿ ದೇವಾಲಯದಲ್ಲಿ, ಬದರೀಕ್ಷೇತ್ರದಲ್ಲೂ ಮಾಡಿದ್ದಾರೆ. ಯಲಹಂಕ, ರಾಜಾನುಕುಂಟೆ, ಕಾಕೋಳು, ಸಂತೆಬಿದನೂರು, ಪೆನುಗೊಂಡ, ಇತ್ಯಾದಿ. ಪೆನುಗೊಂಡ ಒಂದರಲ್ಲೇ 365ದಿನ ಉಳಿದಿದ್ದು 365 ಪ್ರಾಣದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆಂದೂ ಪ್ರತೀತಿಯಿದೆ. ಆದವಾನಿ ಪ್ರಾಂತ್ಯವೊಂದರಲ್ಲೇ 109 ವಿಗ್ರಹಗಳನ್ನು ಪ್ರತಿಷ್ಟೆ ಮಾಡಿದ್ದಾರೆ